# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದ ಹಾಗೂ ಹಿಂದುಳಿದ ವರ್ಗದ ಮೆಟ್ರಿಕ್‌ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ನೀಡುವ ಭೋಜನ ವೆಚ್ಚವನ್ನು ಹೆಚ್ಚಿಸುವ ಬಗ್ಗೆ — ಆದೇಶ.

೦೦೦

ಓದಲಾಗಿದೆ:—

1) ಸರ್ಕಾರಿ ಆದೇಶ ಸಂ. ಎಸ್‌ಡಬ್ಲ್ಯುಎಲ್ 44 ಎಸ್‌ಇಡಬ್ಲ್ಯು 89, ದಿನಾಂಕ 10—4—90.

2) ಸರ್ಕಾರಿ ಆದೇಶ ಸಂ. ಎಸ್‌ಡಬ್ಲ್ಯುಎಲ್ 449 ಎಸ್‌ಇಡಬ್ಲ್ಯು 91, ದಿನಾಂಕ 1—12—92.

3) ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಇವರ ಪತ್ರ ಸಂ. ಸಕನಿ:ಇಡಿ 1:ಸಿಆರ 27:96—97, ದಿನಾಂಕ 21—8—96.

4) ನಿರ್ದೇಶಕರು, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ ಇವರ ಪತ್ರ ಸಂ.ಹಿಂವಅನಿ:ವನಿಶಾ:2:ವಿನಿ:39:95—96, ದಿನಾಂಕ 31—5—96.

೦೦೦

ಪ್ರಸ್ತಾವನೆ:—

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಸರ್ಕಾರವು ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆಯ ಕಾರ್ಯವ್ಯಾಪ್ತಿಯಲ್ಲಿ ಬರುವ ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳ ಭೋಜನಾ ವೆಚ್ಚವನ್ನು 150 ರೂ.ಗಳಿಗೂ (ಒಂದು ತಿಂಗಳಿಗೆ) ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳ ಭೋಜನಾ ವೆಚ್ಚವನ್ನು 200 ರೂ.ಗಳಿಗೂ ಹೆಚ್ಚಿಸಿ ಸರ್ಕಾರ ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಸರ್ಕಾರವು, ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳ ಭೋಜನಾ ವೆಚ್ಚವನ್ನು 150 ರೂ.ಗಳಿಂದ 250 ರೂ.ಗಳಿಗೂ (ಒಂದು ತಿಂಗಳಿಗೆ) ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳ ಭೋಜನಾ ವೆಚ್ಚವನ್ನು 200 ರೂ.ಗಳಿಂದ 300 ರೂ.ಗಳಿಗೂ ಹೆಚ್ಚಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ಮತ್ತು (4)ರಲ್ಲಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರ ಇಲಾಖೆ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಮುಖ್ಯ ಮಾರುಕಟ್ಟೆಯ ದುಬಾರಿ ಬೆಲೆಗಳಲ್ಲಿ ಈಗಿರುವ ಭೋಜನಾ ವೆಚ್ಚದ ಮಿತಿಯಲ್ಲಿ ವಿದ್ಯಾರ್ಥಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಉತ್ತಮ ಆಹಾರ ಸಾಮಗ್ರಿಗಳನ್ನು ಒದಗಿಸುವುದು ದುಸ್ತರವಾಗಿರುವುದರಿಂದ ಹಾಗೂ ಭಾರತ ಸರ್ಕಾರವು ದಿನಾಂಕ 1—10—95ರಿಂದ ಜಾರಿಗೆ ಬರುವಂತೆ ನಿರ್ವಹಣಾ ದರಗಳನ್ನು ಪರಿಷ್ಕರಿಸಿದ್ದು ಅದರಂತೆ ರಾಜ್ಯ ಸರ್ಕಾರವು ನಿಗದಿಪಡಿಸಿರುವ ಭೋಜನಾ ವೆಚ್ಚದ ಮಿತಿ ಭಾರತ ಸರ್ಕಾರವು ಪರಿಷ್ಕರಿಸಿರುವ ದರಗಳಿಗಿಂತಲೂ ಕಡಿಮೆ ಇರುವುದರಿಂದ ಮೆಟ್ರಿಕ್—ಪೂರ್ವ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳ ಮಾಸಿಕ ಭೋಜನಾ ದರ ವೆಚ್ಚದ ಮಿತಿಯನ್ನು 250 ರೂ.ಗಳಿಂದ 500 ರೂ.ಗಳಿಗೆ ಹಾಗೂ ಮೆಟ್ರಿಕ್ ನಂತರದ ಎಲ್ಲಾ ಶಿಕ್ಷಣಗಳ ನಿಲಯವಾಸಿಗಳಿಗೆ ಭೋಜನಾ ವೆಚ್ಚದ ಗರಿಷ್ಠ ಮಿತಿಯನ್ನು ಏಕರೂಪವಾಗಿ 300 ರೂ.ಗಳಿಂದ 600 ರೂ.ಗಳಿಗೆ ಹೆಚ್ಚಿಸಲು ಕೋರಿರುತ್ತಾರೆ.

.....2.

ದಿನಾಂಕ 31-1-97ರಂದು ನಡೆದ 3ನೇ ಸಚಿವ ಸಂಪುಟದ ನಿರ್ಣಯದ ಸಭೆಯಲ್ಲಿ ಸಚಿವ ಸಂಪುಟವು ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆಗಳ ಕಾರ್ಯವ್ಯಾಪ್ತಿಯಲ್ಲಿ ಬರುವ ಮೆಟ್ರಿಕಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳ ಭೋಜನಾ ವೆಚ್ಚವನ್ನು ಈ ಕೆಳಕಂಡಂತೆ ಹೆಚ್ಚಿಸಲು ಒಪ್ಪಿಗೆ ನೀಡಿರುತ್ತದೆ.

ಅ) ಮೆಟ್ರಿಕಪೂರ್ವ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳ
ಮಾಹೆಯಾನ ಭೋಜನಾ ವೆಚ್ಚ ರೂ.250 ರಿಂದ ರೂ. 350.

ಆ) ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳ
ಮಾಹೆಯಾನ ಭೋಜನಾ ವೆಚ್ಚ ರೂ. 300ರಿಂದ ರೂ.400.

<u>ಸರ್ಕಾರಿ ಆದೇಶ ಸಂಖ್ಯೆ: ಸಕಇ 108 ಬಿಸಿಎನ 97 ಬೆಂಗಳೂರು, ದಿನಾಂಕ: 14-2-1997.</u>

ಮೇಲಿನ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆಗಳ ಕಾರ್ಯವ್ಯಾಪ್ತಿಯಲ್ಲಿ ಬರುವ ಮೆಟ್ರಿಕಪೂರ್ವ ಮತ್ತು ಮೆಟ್ರಿಕನಂತರದ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳ ಭೋಜನಾ ವೆಚ್ಚವನ್ನು ದಿನಾಂಕ 1-1-1997ರಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಹೆಚ್ಚಿಸಲಾಗಿದೆ.

ಅ) ಮೆಟ್ರಿಕಪೂರ್ವ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳ
ಮಾಹೆಯಾನ ಭೋಜನಾ ವೆಚ್ಚ ರೂ. 250ರಿಂದ ರೂ. 350.

ಆ) ಮೆಟ್ರಿಕ ನಂತರದ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳ
ಮಾಹೆಯಾನ ಭೋಜನಾ ವೆಚ್ಚ ರೂ.300ರಿಂದ ರೂ. 400.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಡಿ. 'ಓಬಪ್ಪ') 14/2/97
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು — ಇವರಿಗೆ ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು ಕೋರಿದೆ.

<u>ಪ್ರತಿಗಳು:—</u>

ಮಹಾಲೇಖಪಾಲರು (ಲೆಕ್ಕ ಮತ್ತು ತನಿಖೆ), ಕರ್ನಾಟಕ, ಬೆಂಗಳೂರು.
ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
ನಿರ್ದೇಶಕರು, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ, ಬೆಂಗಳೂರು.
ಅರ್ಥಿಕ ಇಲಾಖೆ, ವೆಚ್ಚ -3, ವಿಧಾನಸೌಧ, ಬೆಂಗಳೂರು.
ಸರ್ಕಾರದ ಅಧೀನ ಕಾರ್ಯದರ್ಶಿ, ಯೋಜನಾ ಇಲಾಖೆ, ಬೆಂಗಳೂರು.
ಸರ್ಕಾರದ ಅಧೀನ ಕಾರ್ಯದರ್ಶಿ, ಸಚಿವ ಸಂಪುಟದ ಇಲಾಖೆ, ವಿಧಾನಸೌಧ, ಬೆಂಗಳೂರು.
ಎಲ್ಲಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
ಎಲ್ಲಾ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು.
ಎಲ್ಲಾ ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳು.
ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಅಧಿಕಾರಿಗಳು.
ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
ಕಾರ್ಯದರ್ಶಿ:ಉಪಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು.
ಶಾಖಾ ರಕ್ಷಾ ಕಡತ.
ಹೆಚ್ಚುವರಿ ಪ್ರತಿಗಳು.
ವಾರದ ರಾಜ್ಯ ಪತ್ರ.